**KARNATAKA NURSING & PARAMEDICAL SCIENCES EDUCATION (REGULATION) AUTHORITY**
ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ

**PARA MEDICAL BOARD**

# 40/20A, Lakshmi Complex, First Floor, Opp. Vani Vilas Hospital, Fort, Bengaluru-560002
**Ph No**: 080-26702159 **Email**: pmboffice97@gmail.com / pmbexamination@gmail.com

No: PMB/ SSP /20/2023-24 Date: 27/12/2023

## ಅಧಿಸೂಚನೆ

**ವಿಷಯ:** ಎಸ್.ಎಸ್.ಪಿ ಸ್ಕಾಲರ್‌ಶಿಪ್ ಗಾಗಿ 2023–24ನೇ ಸಾಲಿನ ವಿದ್ಯಾರ್ಥಿಗಳ ಎಸ್.ಎಸ್.ಪಿ ಐ.ಡಿ ಯನ್ನು ಮಂಡಳಿಗೆ ಸಲ್ಲಿಸುವ ಬಗ್ಗೆ.

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ 2023–24ನೇ ಸಾಲಿಗೆ ಎಸ್.ಎಸ್.ಪಿ ಸ್ಕಾಲರ್‌ಶಿಪ್ ಗಾಗಿ ಅರ್ಜಿ ಸಲ್ಲಿಸಲು ಅರೆ ವೈದ್ಯಕೀಯ ಮಂಡಳಿಯಿಂದ ಎಸ್.ಎಸ್.ಪಿ ಐಡಿಯನ್ನು ಯೂನಿಡೇಟಾ ಸಾಫ್ಟ್‌ವೇರ್‌ಗೆ ಅಳವಡಿಸುವುದು ಕಡ್ಡಾಯವಾಗಿರುತ್ತದೆ. 2021–22 ಹಾಗೂ 2022–23 ನೇ ಸಾಲಿಗೆ ಸಂಬಂಧಿಸಿದ ವಿದ್ಯಾರ್ಥಿಗಳ ಎಸ್.ಎಸ್.ಪಿ ಐಡಿ ಮಾಹಿತಿಯನ್ನು ಈಗಾಗಲೇ ಎಸ್.ಎಸ್.ಪಿ ಪೋರ್ಟಾಲ್‌ನಲ್ಲಿ ಅಳವಡಿಸಲಾಗಿದೆ. ಇದಾಗ್ಯೂ ಹಲವಾರು ವಿದ್ಯಾರ್ಥಿಗಳ ಎಸ್.ಎಸ್.ಪಿ ಐ.ಡಿಯು ಅರೆ ವೈದ್ಯಕೀಯ ಮಂಡಳಿಯಲ್ಲಿ ಲಭ್ಯವಿಲ್ಲದ ಕಾರಣ ಎಸ್.ಎಸ್.ಪಿ ಪೋರ್ಟಾಲ್‌ನಲ್ಲಿ ಎಸ್.ಎಸ್.ಪಿ ಐಡಿಯನ್ನು ಅಳವಡಿಸಲಾಗಿರುವುದಿಲ್ಲ. ಆದ್ದರಿಂದ ಎಲ್ಲಾ ಸಂಯೋಜಿತ ಅರೆ ವೈದ್ಯಕೀಯ ಕಾಲೇಜುಗಳು ತಮ್ಮ ಕಾಲೇಜಿನ ವಿದ್ಯಾರ್ಥಿಗಳಿಂದ ಕೋರ್ಸ್‌ವಾರು ಹಾಗೂ ಮೂರು ವರ್ಷದ (2021–22, 2022–23 ಹಾಗೂ 2023–24ನೇ ಸಾಲಿನ) ವಿದ್ಯಾರ್ಥಿಗಳಿಂದ ಎಸ್.ಎಸ್.ಪಿ ಐಡಿಯನ್ನು ಸಂಗ್ರಹಿಸಿ ಈ ಕೆಳಕಂಡ ನಮೂನೆಯಲ್ಲಿ ಮಾಹಿತಿಯನ್ನು ದಿನಾಂಕ: 12/01/2024 ರ ಒಳಗೆ **pmbscholarship19@gmail.com ಗೆ ಇ–ಮೇಲ್ ಮೂಲಕ ಸಾಫ್ಟ್ ಕಾಪಿಯನ್ನು ಸಲ್ಲಿಸಲು ತಿಳಿಸಲಾಗಿದೆ.**

ಮುಂದುವರೆದು ಯಾವುದೇ ವಿದ್ಯಾರ್ಥಿಯು ಎಸ್.ಎಸ್.ಪಿ ಸ್ಕಾಲರ್‌ಶಿಪ್ ಗಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ವಿದ್ಯಾರ್ಥಿಯ ಎಸ್.ಎಸ್.ಪಿ ಐಡಿ ಯು ಸ್ಕಾಲರ್‌ಶಿಪ್ ಪೋರ್ಟಾಲ್‌ಗೆ ಶೇರ್ ಆಗಿರುವುದಿಲ್ಲ. ನಿಮ್ಮ ಬೋರ್ಡ್ ಅಥವಾ ಯೂನಿವರ್ಸಿಟಿಯನ್ನು ಸಂಪರ್ಕಿಸಿ ಎಂಬ ದೋಷವು ಕಂಡುಬಂದಲ್ಲಿ ದಯವಿಟ್ಟು ತಮ್ಮ ಹೆಸರು, ರೆಜಿಸ್ಟರ್ ನಂಬರ್ ಹಾಗೂ ಎಸ್.ಎಸ್.ಪಿ ಐಡಿಯನ್ನು **pmbscholarship19@gmail.com ಗೆ ಇ–ಮೇಲ್** ಮಾಡುವಂತೆ ತಿಳಿಸಲಾಗಿದೆ.

ಕೊನೆಯ ದಿನಾಂಕವು ಮುಗಿದಲ್ಲಿಯೂ ಸಹ ತಮ್ಮ ಕಡೆಯಿಂದ ಎಸ್.ಎಸ್.ಪಿ ಐಡಿಯನ್ನು ಸಲ್ಲಿಸದೇ ಹೋದಲ್ಲಿ ವಿದ್ಯಾರ್ಥಿವೇತನ ವಂಚಿತರಾದರೆ ಅದಕ್ಕೆ ಅರೆ ವೈದ್ಯಕೀಯ ಮಂಡಳಿಯು ಕಾರಣವಲ್ಲ ಎಂಬ ಮಾಹಿತಿಯನ್ನು ತಮ್ಮ ಗಮನಕ್ಕೆ ತರಲಾಗಿದೆ.

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಕಾಲೇಜಿನ ಹೆಸರು | ಕಾಲೇಜಿನ ಕೋಡ್ | ವರ್ಷ | ಕೋರ್ಸ್ | ವಿದ್ಯಾರ್ಥಿಯ ಹೆಸರು | ವಿದ್ಯಾರ್ಥಿಯ ರೆಜಿಸ್ಟರ್ ನಂಬರ್ | ವಿದ್ಯಾರ್ಥಿಯ ಎಸ್.ಎಸ್.ಪಿ ಐಡಿ |
|---|---|---|---|---|---|---|---|---|
| | | | | 1st/ 2nd/ 3rd | | | | |

ವಂದನೆಗಳೊಂದಿಗೆ,

27/12/2023

ವಿಶೇಷಾಧಿಕಾರಿಗಳು,
ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ
ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ
ಬೆಂಗಳೂರು.